# ಗಣಿತ ವಿಷಯದ ಸೂಚನೆಗಳು

## ಶಿಕ್ಷಕರಿಗೆ ಸೂಚನೆಗಳು

- ಮನೆಯಲ್ಲಿಯೇ ಮಗುವಿನ ಕಲಿಕಾ ಪ್ರಕ್ರಿಯೆಗೆ ಅಗತ್ಯ ನೆರವು ನೀಡುವುದು.
- ಮಗು ಹಿಂದಿನ ತರಗತಿಯಲ್ಲಿ ಕಲಿಯಬೇಕಾಗಿದ್ದ ಗಣಿತ ಕಲಿಕಾಂಶಗಳನ್ನು ಪಟ್ಟಿ ಮಾಡಿ ಮೈಲುಗಲ್ಲುವಾರು ನಿಡಲಾಗಿದೆ.
- ಯಾವುದೇ ತರಗತಿಯ ಯಾವುದೇ ಮೈಲುಗಲ್ಲುಗಳನ್ನು ಕೈಬಿಟ್ಟಿರುವುದಿಲ್ಲ. ಆದರೆ ಲಭ್ಯ ಅವಧಿಗಳನ್ನು ಗಮನದಲ್ಲಿಟ್ಟಿಕೊಂಡು ಮೂರೂ ತರಗತಿಗಳಲ್ಲಿನ ಕಲಿಕಾ ಪೂರಕ ಹಂತದಲ್ಲಿನ ಆಡಿ ಕಲಿಯೋಣ ಚಟುವಟಿಕೆಗಳನ್ನು ಈ ಅವಧಿಯಲ್ಲಿ ಕೈ ಬಿಡಲಾಗಿದೆ.
- ಶಿಕ್ಷಕರಿಗೆ ಅನೂಕುಲವಾಗುವ ದೃಷ್ಟಿಯಿಂದ 10 ದಿನ ಪೂರ್ವಭಾವಿ ಚಟುವಟಿಕೆಗಳು ಸೇರಿದಂತೆ ಒಟ್ಟು 60 ದಿನದವರೆಗೂ ಪ್ರತಿ ದಿನ ತರಗತಿವಾರು ಯಾವ ಚಟುವಟಿಕೆಗಳನ್ನು ನೀಡಬೇಕು ಎಂಬುದನ್ನು ಮೆಟ್ಟಿಲು ಸಂಖ್ಯೆ, ಚಟುವಟಿಕೆಯ ಹೆಸರು, ಲೋಗೋ, ಶೀರ್ಷಿಕೆ ಒಳಗೊಂಡಂತೆ ಕಲಿಕಾ ಪ್ರಕ್ರಿಯೆಯ ಮಾಹಿತಿ ನೀಡಲಾಗಿದೆ. ಹಾಗೇಯೇ ಆಯಾ ದಿನಗಳಂದು ನಿರ್ವಹಿಸಬೇಕಾದ ವರ್ಕಶಿಟ್ ಹಾಳೆಗಳ ಕ್ರಮ ಸಂಖ್ಯೆಯನ್ನು ನೀಡಲಾಗಿದೆ.
- ಈ ಪ್ಯಾಕೇಜ್ ಶಿಕ್ಷಕರಿಗೆ 60 ದಿನಗಳ ಮಾರ್ಗದರ್ಶಿ ಕೈಪಿಡಿಯಂತಿದೆ.
- ಪ್ರತಿ ಮೈಲುಗಲ್ಲಿನಲ್ಲಿ ಕಲಿಕಾಂಶ, ಅಭ್ಯಾಸ ಮತ್ತು ಮೌಲ್ಯಮಾಪನ ಹೀಗೆ ಹಂತಗಳ ಪ್ರಕಾರ ಸಾಗುತ್ತದೆ.
- ಸಾಧ್ಯವಿದ್ದ ಕಡೆಗೆ ಕಲಿಕಾಂಶ, ಹಾಡು, ಅಭ್ಯಾಸ, ಸೂಚನೆ ಇತ್ಯಾದಿಗಳನ್ನು ವಿಡಿಯೋ, ಆಡಿಯೋಗಳ ರೂಪದಲ್ಲಿ ನೀಡಲಾಗಿದೆ. ರೇಡಿಯೋ ಪಾಠಗಳನ್ನು ಕೂಡಾ ಬಳಸಿಕೊಂಡಿದ್ದು ಇವುಗಳಿಗೆ QR ಕೋಡ್/ಲಿಂಕ್ ನೀಡಲಾಗಿದೆ.
- ಪ್ರತಿ ಮೈಲುಗಲ್ಲಿನಲ್ಲಿಯೂ ಕೂಡಾ ಅವಶ್ಯಕತೆಗೆ ತಕ್ಕಂತೆ ವರ್ಕಶೀಟ್‌ಗಳನ್ನು ತಯಾರಿಸಲಾಗಿದೆ. ಹೆಚ್ಚುವರಿ ವರ್ಕಶೀಟ್‌ಗಳು ಅವಶ್ಯವಿದ್ದಲ್ಲಿ ಶಿಕ್ಷಕರು ತಯಾರಿಸಿಕೊಳ್ಳುವುದು. ಈ ವರ್ಕಶೀಟ್‌ಗಳಿಗೆ ಕ್ರಮಸಂಖ್ಯೆಗಳನ್ನು ನೀಡಲಾಗಿದೆ.
- ಮಕ್ಕಳು ಬರೆದಿರುವ ವರ್ಕಶಿಟ್‌ಗಳನ್ನು ಚಟುವಟಿಕೆ ನಿರ್ವಹಿಸಿದ ನಂತರ ವಾಪಸ್ ಪಡೆದು ಪರಿಶೀಲಿಸಿ ದೃಢೀಕರಿಸುವುದು.
- ಗಣಿತ ಕಲಿಕೆಗೆ ಅಗತ್ಯವಿರುವ ಮಿಂಚುಪಟ್ಟಿ ಚಾರ್ಟ್‌ಗಳನ್ನು ತಯಾರಿಸಿಕೊಳ್ಳುವುದು. ಗಣಿತ ಕಿಟ್ ಬಳಸಿಕೊಳ್ಳುವುದು.
- ಕಲಿಕೆಗೆ ಸಂಬಂಧಿಸಿದಂತೆ ತಾವೇ ಚಿಕ್ಕ ಚಿಕ್ಕ ವೀಡಿಯೋ/ಆಡಿಯೋಗಳನ್ನು ತಯಾರಿಸಿ ಕಳುಹಿಸುವುದು.
- ಮಗುವಿನ ಸುತ್ತಲಿನ ಪರಿಸರದಲ್ಲಿ ಸಿಗುವ ವಸ್ತುಗಳನ್ನು ಬಳಸಿ/ಉದಾಹರಣೆ ನಿಡಿ ಗಣಿತ ಕಲಿಕೆಯನ್ನು ಗಟ್ಟಿಗೊಳಿಸುವುದು.
- ಗಣಿತ ಕಲಿಕೆಗೆ ಸಹಕಾರಿಯಾಗುವ ಉಪ್ಪು ಮನೆ ಆಟ, ಚಿಣ್ಣಿ ದಾಂಡು, ಗೋಲಿ ಆಟ ಇತ್ಯಾದಿಗಳನ್ನು ಸಾಮಾಜಿಕ ಅಂತರದೊಂದಿಗೆ ಆಡಿಸುವಂತೆ ಪಾಲಕರಿಗೆ ತಿಳಿಸುವುದು.

# ಮಾರ್ಗದರ್ಶಕರಿಗೆ ಸೂಚನೆಗಳು

- ಮಕ್ಕಳಿಗೆ ಗಣಿತ ಕಲಿಕೆಯ ಕುರಿತು ಆಸಕ್ತಿಯನ್ನು ಬೆಳೆಸುವುದಕ್ಕಾಗಿ ಸಕಾರಾತ್ಮಕವಾಗಿ ಮಾತನಾಡುವುದು.
- ಈ ಸಂದರ್ಭದಲ್ಲಿ ಮಕ್ಕಳ ಕಲಿಕೆಯಲ್ಲಿ ತಮ್ಮ ಪಾತ್ರವೂ ಕೂಡಾ ಮಹತ್ವವಾದುದು ಎಂಬುದನ್ನು ತಿಳಿಯುವುದು.
- ಮಗುವಿನ ತರಗತಿ ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿರುವುದು. ಶಿಕ್ಷಕರಿಂದ ಬರುವ ಸೂಚನೆಗಳನ್ನು ತಿಳಿದುಕೊಂಡು ಮಗುವಿಗೆ ಅರ್ಥೈಸುವುದು.
- ಮಗುವಿನ ಕಲಿಕೆಗೆ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸುವುದು.
- ಮಗುವಿಗೆ ನೀಡಿರುವ ವರ್ಕಶೀಟ್‌ಗಳಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆ ಮಾಡಿಸುವುದರೊಂದಿಗೆ ಮಗುವೇ ಸ್ವತಃ ಮಾಡುವಂತೆ ಪ್ರೇರೇಪಿಸುವುದು.
- ಸ್ಲೇಟ್ ಮತ್ತು ಬಳಪದಿಂದ ಅಭ್ಯಾಸ ಮಾಡುವ ರೂಢಿ ಬೆಳೆಸುವುದು.
- ಸೃಜನಾತ್ಮಕ ಚಟುವಟಿಕೆಗಳಾದ ಆಟಿಕೆ ತಯಾರಿಕೆ, ಚಿತ್ರಬರೆಯುವುದು, ಒಗಟು ಬಿಡಿಸುವಂತಹ ಚಟುವಟಿಕೆಗಳನ್ನು ಮಾಡಿಸುವುದು.
- ಗಣಿತ ಕಲಿಕೆಗೆ ಸಹಕಾರಿಯಾಗಿರುವ ಬಸ್ ಟಿಕೆಟ್ ನಂಬರ್, ರಶೀದಿಯ ನಂಬರ್, ಪುಸ್ತಕದ ಪುಟಗಳ ಸಂಖ್ಯೆ, ಗಾಡಿಗಳ ನಂಬರ್ , ಮನೆ ನಂಬರ್ ಇತ್ಯಾದಿಗಳನ್ನು ಹೇಳಿಸುವುದು ಮತ್ತು ಬರೆಯಿಸುವುದು.
- ಗಣಿತ ಕಲಿಕೆಗೆ ಸಹಕಾರಿಯಾಗುವ ಉಪ್ಪು ಮನೆ ಆಟ, ಚಿಣ್ಣಿ ದಾಂಡು, ಗೋಲಿ ಆಟ ಇತ್ಯಾದಿಗಳನ್ನು ಸಾಮಾಜಿಕ ಅಂತರದೊಂದಿಗೆ ಆಡಿಸುವುದು.

*******************